ಬೆಳೆಯತೊಡಗಿದೆ.

ಬಾಪು: ಬೇಡಿದವರಿಗೂ, ಬೇಡಲಾರದವರಿಗೂ ಕೊಟ್ಟು ಕೊಟ್ಟು ಭಾರತಕ್ಕೇ ಅಗಿಗಳು ಉಳಿಯುವವ್ರೋ ಇಲ್ಲವ್ರೋ ಸಂಶಯ ಬರತೊಡಗಿದೆ.

ಅಣ್ಣ: ಬಾಪೂಜೀ, ಬಸವಣ್ಣ ಹುಟ್ಟಿ ಧರ್ಮಪ್ರಸಾರ ಮಾಡಿದ್ದರಿಂದ ಪಂಚಾಚಾರ್ಯರ ಪಕ್ಷ, ಶರಣರ ಪಕ್ಷ ಎಂಬ ಪಂಗಡಗಳು ಸಮಾಜದಲ್ಲಿ ಕಾಣಿಸಿಕೊಂಡು ಏಕತೆಯನ್ನು ಮುರಿದು, ಬಡಿದಾಟಕ್ಕೆ ದಾರಿಯಾಗಿ ನಿಂತಿತು. ಬಾಪು ಹುಟ್ಟಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರಿಂದ ಭಾರತದೇಶ–ಪಾಕಿಸ್ತಾನ ಎಂಬ ತುಂಡುಗಳು ರಾಜ್ಯದಲ್ಲಿ ಕಾಣಿಸಿಕೊಂಡು ಅಭಿನ್ನತೆಯನ್ನು ಮುರಿದು, ಒಳಜಗಳಕ್ಕೆ ಕಾರಣವಾಗಿ ಕುಳಿತಿತು. ಇದು ಒಳ್ಳೆಯ ಕಾರ್ಯಕ್ಕೆ ಬಿಟ್ಟ ಕಿಲುಬೇ!

ಬಾಪು: ಪ್ರತಿಯೊಂದು ಕಲ್ಯಾಣಕ್ಕೆ ಜನ್ಮವಿದ್ದುದು ನಿಜವಾದರೆ, ಅದಕ್ಕೆ ಮರಣವಿರುವುದೂ ಅನಿವಾರ್ಯವೇ. ಜನ್ಮದಿಂದ ಮರಣದ ಕಡೆಗೆ ಸಾಗಿದ್ದು ದಾರಿಯಲ್ಲಿ ವೃದ್ಧಾಪ್ಯದ ಅರಣ್ಯದೊಳಗೆ ಹಾಯ್ದು ಹೋಗಲೇಬೇಕಾಗುತ್ತದೆ. ಹುಟ್ಟಿದ್ದು ವೃದ್ಧಾಪ್ಯದ ಅರಣ್ಯ ದಾಟಿದ ಬಳಿಕಂತೂ ಸಾಯಲೇ ಬೇಕು, ಇಲ್ಲವೆ ಆ ಅರಣ್ಯ ಪ್ರವೇಶಿಸುವ ಮೊದಲೇ ಕೆಲವು ಸಾಯುವುದುಂಟು.

ಅಣ್ಣ: ನವಮಾಸ ತುಂಬದೆ ಯಾವುದೂ ಹುಟ್ಟಲಾರದು, ಹುಟ್ಟಿದ್ದಕ್ಕೆ ಪ್ರಾಯ ತುಂಬಿ ಬರುವುದೂ ಸ್ವಾಭಾವಿಕ. ಕೊನೆಯಲ್ಲಿ ಆಯುಷ್ಯ ತುಂಬಿಬರುವುದೂ ಸಹಜವೇ. ನನ್ನ ಮಟ್ಟಿಗಂತೂ ಪ್ರಾಯ ತುಂಬಿಬರುವಾಗಲೇ ಆಯುಷ್ಯವೂ ತುಂಬಿಬಂದಿತೆನ್ನಬೇಕು. ಕೂಡಲಸಂಗನ ಶರಣರ ತೊತ್ತಿನ ತೊತ್ತಿನ ಮರುದೊತ್ತಿನ ಸೇವಕ ನಾನು. ಅಪ್ಪಣೆಯಾಗುತ್ತಲೇ ಹೊರಟೇಬಿಟ್ಟೆ.

ಬಾಪು: ಬದುಕಿನಲ್ಲಿಯೇ ಕೈಲಾಸ ಬರಮಾಡಿಕೊಂಡ ನಿಮಗೆ, ಕೈಲಾಸಕ್ಕೆ ಹೋಗುವುದು ಅಷ್ಟೊಂದು ಉತ್ಸಾಹದ ವಿಷಯವಾಗಿರಲಿಕ್ಕಿಲ್ಲ.

ಅಣ್ಣ: ಉತ್ಸಾಹದ ವಿಷಯವೂ ಆಗಿರಲಿಲ್ಲ; ನಿರುತ್ಸಾಹದ ವಿಷಯವೂ ಆಗಿರಲಿಲ್ಲ. ಭೂಲೋಕದ ಜಂಜಡಕ್ಕೆ ಅಂಜದವನು, ಕೈಲಾಸದ ವಿಲಾಸಕ್ಕೆ ಮರುಳನೂ ಆಗಲಾರನು.

ಬಾಪು: ಕುಳಿತಲ್ಲಿಯೇ ಎಲ್ಲವನ್ನೂ ಎಳಕೊಳ್ಳುವ ಶಕ್ತಿಯುಳ್ಳವನು ಯಾವ ಲೋಕದಲ್ಲಿದ್ದರೇನು?

ಅಣ್ಣ: ಬಾಪೂಜಿ, ನಿಮ್ಮ ಪ್ರಭಾವಲಯದಲ್ಲಿ ಬಂದವನು ಯಾವನಿದ್ದರೂ ನಿಮಗೆ ಗೆಳೆಯನಾಗುತ್ತಿರಲಿಲ್ಲವೇ? ವಿರೋಧಿಯಾಗಿಯೇ ಉಳಿಯಬೇಕೆನ್ನುವವರು, ನಿಮ್ಮ ಪ್ರಭಾವಲಯದ ಸಮೀಪಕ್ಕೂ ಸುಳಿಯುತ್ತಿರಲಿಲ್ಲ. ಭಾರತವೇ ನಿಮ್ಮನ್ನು ಕರೆಯುತ್ತಿರುವಾಗ ನೀವು ಮತ್ತೆ ಭಾರತದಲ್ಲಿ ಮೈದೋರದೆ ಗತ್ಯಂತರವಿಲ್ಲ.

ಬಾಪು: ಅಣ್ಣನವರೇ, ಕರ್ನಾಟಕವಷ್ಟೇ ನಿಮ್ಮನ್ನು ಕರೆಯುತ್ತದೆಂದು ತಿಳಿಯಬೇಡಿರಿ. ನೀವೀಗ ಇಡಿಯ ಭಾರತಕ್ಕೇ ಬೇಕಾಗಿರುವಿರಿ; ಇಡಿಯ ಜಗತ್ತೇ ಈ ಸಾರೆ ನಿಮ್ಮನ್ನು ಸ್ವೀಕರಿಸಲಿದೆ.

ಅಣ್ಣ: ಶರಣಸಂಗವಿದ್ದರೆ ಕೈಲಾಸವೇನು, ಭೂಲೋಕವೇನು? ಶರಣರು ಮೆಟ್ಟಿದ ಧರೆ ಪಾವನವಲ್ಲವೇ?

ಬಾಪು: ಬಸವಣ್ಣನವರೇ, ಸಂಗನ ಅನುಭಾವದಿಂದ ನಿಮ್ಮ ತನು–ಮನ–ಧನ ಪಾವನವಾದ ಕಾರಣದಿಂದ ನಿಮ್ಮ ವಚನಗಳು 'ಕನ್ನಡನುಡಿಯನ್ನು ಪಾವನಗೊಳಿಸಿದವು. ಕನ್ನುಡಿಯು ಸತ್ತ್ವಶಾಲಿಯಾಯಿತು; ಸತ್ತ್ವಶೀಲವಾಯಿತು. ದಿವ್ಯಾನುಭವವನ್ನು ಧರಿಸುವ ಶಕ್ತಿಯನ್ನು ಪಡೆಯಿತು. ಆತ್ಮಾನುಭವವನ್ನು ಅರಿಯುವುದಕ್ಕೆ ಆತಂಕವಾಗಿದ್ದ ಕಂಚಿನಗೋಡೆಯನ್ನು ನಿಮ್ಮ ವಚನದ ಕಾವು ಕರಗಿಸಿಟ್ಟದ್ದರಿಂದ ಸಾಮಾನ್ಯರಿಗೂ ಸ್ತ್ರೀಯರಿಗೂ ಮುಕ್ತದ್ವಾರವಾಯಿತು.

ಅಣ್ಣ: ಬಾಪೂಜಿ, ಈ ಮಾತು ಅತಿಶಯೋಕ್ತಿಯಾಯಿತು. ಗುಜರಾತಿ ಭಾಷೆಗೆ ನೀವು ಕೊಟ್ಟ ಆತ್ಮಸಂಶೋಧನದ ಚರಿತ್ರೆಯು ಅದೆಂಥ ಕಾಣಿಕೆ. ನೀವು ನಡೆಸಿದ ಪತ್ರಿಕೆ ಗುಜರಾತಿಗೆ ನವಜೀವನವಾಯಿತು. ನಿಮ್ಮ ಸಂಪರ್ಕದಿಂದ ಗುಜರಾತಿ ಒಂದೇ ಏಕೆ, ಭಾರತದ ಭಾಷೆಗಳೆಲ್ಲ ಜೀವಕಳೆ ತೊಟ್ಟವು. ಇಂಗ್ಲೀಷ್ ಭಾಷೆ ಕೂಡ ಮೆರಗು ಪಡೆಯಿತು. ಉಕ್ಕಿನ ಕಡಲೆಯಾಗಿ ಕುಳಿತಿದ್ದ ಹಿಂದಿನ ಶಾಸ್ತ್ರಗ್ರಂಥಗಳನ್ನು ಅರ್ಥೈಸುವ ನಿಮ್ಮ ಹೃದಯ ಗ್ರಂಥವು ಲೌಕಿಕದಲ್ಲಿ ಪರಮಾರ್ಥವನ್ನು ತುಂಬಿತು. ರಾಜಕಾರಣಕ್ಕೆ ಕೈಪಿಡಿಯಾಯಿತು; ಸಮಾಜೋದ್ಧಾರಕ್ಕೆ ಕೈದೀವಟಿಗೆಯಾಯಿತು. ಗುಜರಾತದ ಮಗುವಾಗಿದ್ದರೂ ಭಾರತದ ಪ್ರತೀಕರಾಗಿ ಜಗತ್ತಿನಲ್ಲಿ